**ಸಾಕ್ಷಿಯನ್ನು ದಿನಾಂಕ 24.10.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನಿಡಿ1 ಎಂದು, ದಿನಾಂಕ 2.8.2006ರ ಮೂಲ ದಾನಪತ್ರವನ್ನು ಹಾಜರುಪಡಿಸಿದ್ದು ಸದರಿ ದಾನಪತ್ರದ ಕೊನೆ ಪುಟ ಹರಿದುಹೋಗಿರುವುದರಿಂದ ಅದರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಮೂಲ ದಾನಪತ್ರವನ್ನು ನಿಡಿ2 ಎಂದು, ಅದರ ದೃಢೀಕೃತ ಪ್ರತಿಯನ್ನು ನಿಡಿ2ಎ ಎಂದು, ದಿನಾಂಕ 14.9.2006ರ ಮುದ್ರಾಂಕಗಳ ಉಪ ಆಯುಕ್ತರು, ಮೈಸೂರು ರವರ ಆದೇಶವನ್ನು ನಿಡಿ3 ಎಂದು, ದಿನಾಂಕ 25.12.2003ರ ನೋಂದಾಯಿತವಲ್ಲದ ದಾನಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯು ನೋಂದಣಿಯಾಗದಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಎರಡು ಅಸೆಸಮೆಂಟ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಡಿ4 ಮತ್ತು ನಿಡಿ5 ಎಂದು, ಪಟ್ಟಣ ಪಂಚಾಯಿತಿ, ಹೆಚ್.ಡಿ.ಕೋಟೆ ರವರು ನೀಡಿರುವ ವಾಸಸ್ಥಳದ ದೃಢೀಕರಣ ಪತ್ರವನ್ನು ನಿಡಿ6 ಎಂದು, ದಿನಾಂಕ 16.9.2006ರ 4 ನೇ ಪ್ರತಿವಾದಿಯು ನೋಟರಿ ಸಮಕ್ಷಮ ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ರುಜುವಾತುಪಡಿಸುವ ಷರತ್ತಿನೊಂದಿಗೆ ಅದನ್ನು ನಿಡಿ7 ಎಂದು, ಪಟ್ಟಣ ಪಂಚಾಯಿತಿ, ಹೆಚ್.ಡಿ.ಕೋಟೆ ರವರು ನೀಡಿರುವ ವಾಸಸ್ಥಳದ ದೃಢೀಕರಣ ಪತ್ರವನ್ನು ನಿಡಿ8 ಎಂದು, ಪಟ್ಟಣ ಪಂಚಾಯಿತಿ, ಹೆಚ್.ಡಿ.ಕೋಟೆ ರವರು ನೀಡಿರುವ ಮುದ್ರಾಂಕ ಶುಲ್ಕ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ರುಜುವಾತುಪಡಿಸುವ ಷರತ್ತಿನೊಂದಿಗೆ ಅದನ್ನು ನಿಡಿ9 ಎಂದು, ಸ್ವಯಂ ನಿರ್ಧರಣಾ ಆಸ್ತಿ ತೆರಿಗೆ ಚಲನನ್ನು ನಿಡಿ10 ಎಂದು, ದಿನಾಂಕ 21.7.2006 ರಂದು 4ನೇ ಪ್ರತಿವಾದಿಯು ಪುರಸಭೆ ಮುಖ್ಯಾಧಿಕಾರಿಗೆ ಬರೆದಿರುವ ಪತ್ರದ ಪ್ರತಿಯನ್ನು ನಿಡಿ11 ಎಂದು, ನನ್ನ ತಂದೆ ಪುರಸಭೆ ಮುಖ್ಯಾಧಿಕಾರಿಗೆ ಬರೆದಿರುವ ಪತ್ರದ ಪ್ರತಿಯನ್ನು ನಿಡಿ12 ಎಂದು, ದಿನಾಂಕ 13.10.2006ರಂದು ಜಿಲ್ಲಾಧಿಕಾರಿಗಳ ನ್ಯಾಯಾಲಯ, ಮೈಸೂರು ರವರು ಹೆಚ್.ಡಿ.ಕೋಟೆಯ ಪುರಸಭೆ ಮುಖ್ಯಾಧಿಕಾರಿಗೆ ನೀಡಿರುವ ಪತ್ರದ ಪ್ರತಿಯನ್ನು ನಿಡಿ13 ಎಂದು, ದಾವ ಮನೆಗೆ ಸಂಬಂಧಪಟ್ಟ 14 ಭಾವಚಿತ್ರಗಳನ್ನು ನಿಡಿ14 ರಿಂದ ನಿಡಿ27 ಎಂದು, ಸದರಿ ಭಾವಚಿತ್ರಗಳಿಗೆ ಸಂಬಂಧಪಟ್ಟ ಸಿ.ಡಿ.ಯನ್ನು ನಿಡಿ28 ಎಂದು, ಅದಕ್ಕೆ ಸಂಬಂಧಪಟ್ಟ ಪೆನ್‌ಡ್ರೈವನ್ನು ನಿಡಿ29 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.